ವಿ-330-(20)

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಪುಟ್ಟಣ್ಣ, ಶ್ರೀ ಶಶೀಲ್ ಜಿ ನಮೋಶಿ ಹಾಗೂ ಡಾ:ವೈ.ಎ.ನಾರಾಯಣಸ್ವಾಮಿ ಇವರುಗಳಿಂದ ನಿಯಮ 330 ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.

**ವಿಷಯ**

ವೃತ್ತಿ ಶಿಕ್ಷಣ (J.O.C) ಇಲಾಖೆಯಲ್ಲಿ ಕಳೆದ 20-25 ವರ್ಷಗಳ ಸೇವೆ ಸಲ್ಲಿಸಿದ ಶಿಕ್ಷಕರನ್ನು ದಿನಾಂಕ:06.04.2011 ವಿಶೇಷ ವಿಧೇಯಕದನ್ವಯ ವಿವಿಧ ಇಲಾಖೆಗಳಲ್ಲಿ ವಿಲೀನಗೊಳಿಸಲಾಗಿದೆ. ಆದರೆ, ವಿಧೇಯಕದಲ್ಲಿ ಖಾಯಂ ಪೂರ್ವ ಸೇವೆಯನ್ನು ಪರಿಗಣಿಸಿರುವುದಿಲ್ಲ. ಇದರಿಂದ, ಸದರಿ ಶಿಕ್ಷಕರಿಗೆ ಯಾವುದೇ ನಿವೃತ್ತಿ ನಂತರ ಪಿಂಚಣಿ ದೊರೆಯುವುದಿಲ್ಲ. ಆದುದರಿಂದ, ವಿಧೇಯಕ ತಿದ್ದುಪಡಿಸಿ ಇವರ ಖಾಯಂ ಪೂರ್ವ ಸೇವೆಯನ್ನು ಪರಿಗಣಿಸಿ, ನಿಶ್ಚಿತ ಪಿಂಚಣಿ ನೀಡುವ ಕುರಿತು.

**ಉತ್ತರ**

ಕರ್ನಾಟಕ ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರುಗಳನ್ನು ವಿಲೀನಗೊಳಿಸುವ ಅಧಿನಿಯಮ ಸಂಖ್ಯೆ:ಸಂವ್ಯಶಾಇ 22 ಶಾಸನ 2011, ದಿನಾಂಕ:06.04.2011 ರಂದು ಜಾರಿಗೆ ಬಂದಿದ್ದು, ಈ ವಿಧೇಯಕದಲ್ಲಿ ವಿಧಿಸಿರುವ ಷರತ್ತುಗಳ ಆಧಾರದ ಮೇಲೆ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಉಪನ್ಯಾಸಕರನ್ನು ವಿಲೀನ ವಿಧೇಯಕದನ್ವಯ ದಿನಾಂಕ:06.04.2011ಕ್ಕೆ ನಿರಂತರವಾಗಿ 05 ವರ್ಷಗಳ ಸೇವೆ ಸಲ್ಲಿಸಿರುವ ನೌಕರರುಗಳನ್ನು ವಿವಿಧ ಇಲಾಖೆಗಳಲ್ಲಿ ವಿಲೀನಗೊಳಿಸಲಾಗಿದೆ. ವಿಲೀನಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನು ಕರ್ತವ್ಯಕ್ಕೆ ಹಾಜರಾದ ನಂತರ, ಈ ಅಧಿನಿಯಮದ ಅಡಿಯಲ್ಲಿ ಆತನ ಪ್ರಾರಂಭಿಕ ಮೂಲ ವೇತನವನ್ನು, ಆತನು ವಿಲೀನಗೊಂಡ ಹುದ್ದೆಯ ಪ್ರವರ್ಗದ ಕಾಲಿಕ ವೇತನ ಶ್ರೇಣಿಯ ಕನಿಷ್ಟಕ್ಕೆ ನಿಗಧಿಗೊಳಿಸತಕ್ಕದ್ದು ಹಾಗೂ ತನ್ನ ವಿಲೀನಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ವೇತನ, ಜೇಷ್ಠತೆ ಹಾಗೂ ರಜೆ ಅಥವಾ ಪಿಂಚಣಿಗೆ ಸಂಬಂಧಿಸಿದಂತೆ ಲೆಕ್ಕಕ್ಕೆ ತೆಗದುಕೊಳ್ಳತಕ್ಕದಲ್ಲ ಎಂಬ ಷರತ್ತು ವಿಧಿಸಲಾಗಿದೆ. ಅಲ್ಲದೆ, ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರುಗಳನ್ನು ವಿಲೀನಗೊಳಿಸುವ ಅಧಿನಿಯಮ 2011ರ ನಿಯಮ-3ರಲ್ಲಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರುಗಳನ್ನು ಒಂದು ಸಲದ ಕ್ರಮವಾಗಿ ವಿಲೀನಗೊಳಿಸಲು ಪರಿಗಣಿಸಿರುವುದರಿಂದ, ವಿಲೀನ ವಿಧೇಯಕ ತಿದ್ದುಪಡಿ ಮಾಡಲು ಹಾಗೂ ಖಾಯಂಪೂರ್ವ ಸೇವೆಯನ್ನು ಪರಿಗಣಿಸಿ, ನಿಶ್ಚಿತ ಪಿಂಚಣಿ ನೀಡಲು ಅವಕಾಶವಿರುವುದಿಲ್ಲ.

**ಸಂಖ್ಯೆ:ಇಪಿ 37 ಟಿವಿಇ 2020**

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು